ಶ್ರೀ ಟಿ. ಚನ್ನಯ್ಯ.—ಅದು ಪ್ರತಿಯೊಂದು ರೆವಿನ್ಯೂ agency ಮಾಡಬೇಕಾದರೆ ಪರಿಮಿತಿ ಇಷ್ಟೇ ಎಂದು ಇರುತ್ತದೆ. 10 ಸಾವಿರಕ್ಕೆ ಮೀರಿದ ಕೆಲಸಗಳನ್ನು Public Works Department ನವರು ಮಾಡಬೇಕು. ಅದರ ಪ್ರಕಾರ ಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ 25 ಸಾವಿರ ರೂಪಾಯಿ ಕೆಲಸ ಮುಗಿದಿದೆ ಎಂದು ಹೇಳಿದ್ದೀರಿ. ಆದರೆ ಅದು contract ಮುಖಾಂತರ ಆಗಿದೆಯೋ ಅಥವಾ ಆಮಾನತ್ ಮುಖಾಂತರ Public Works Department ಮಾಡಿಸಿದ್ದಾರೆಯೋ?

Sri T. CHANNIAH.—Notice.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಆ ರಸ್ತೆಯ ಉದ್ದ ಎಷ್ಟು?

ಶ್ರೀ ಟಿ. ಚನ್ನಯ್ಯ.—ಒಂಬತ್ತು ಮೈಲಿಗಳು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಒಂಬತ್ತು ಮೈಲಿ ರಸ್ತೆಯನ್ನು ಅಷ್ಟು ಅಂದಾಜು ಒದಗಿಸಿ ರಿಪೇರಿ ಮಾಡುವುದಕ್ಕೆ ಎರಡು ವರ್ಷ ಆಗಿರುವುದು ಬಹಳ ಜಾಸ್ತಿಯಲ್ಲವೇ?

ಶ್ರೀ ಟಿ. ಚನ್ನಯ್ಯ.—ಆಗಲೇ ತಿಳಿಸಿದ ಹಾಗೆ Public Works Departmentನವರಿಗೆ ಆ ಕೆಲಸವನ್ನು ವಹಿಸುವುದಾಂದ ನಿಧಾನವಾಗಿದೆ. ಆದ್ದರಿಂದ ಆ ಕೆಲಸವನ್ನು ಜಾಗ್ರತೆ ಮಾಡುವುದಕ್ಕೆ ಅವರಿಗೆ ತಿಳಿಸಿ ಏರ್ಪಾಡು ಮಾಡುತ್ತೇವೆ.

Mr. SPEAKER.—Now it is taken over by the District Board.

Sri T. CHANNIAH.—But the work will be executed by the Public Works Department.

School Buildings in Bellary-District (Construction).

Q.—370. Sri IJARI SIRASAPPA (Harapanahalli).—

Will the Government be pleased to state:—

(*a*) the amounts donated and credited by the public to the credit of local boards and the Government as their share towards the construction of school buildings in Bellary District;

(*b*) when were these amounts deposited;

(*c*) why the said constructions have not been taken up; and what action has been taken to start these works early?

A.—Sri T. CHANNIAH (Minister for Public Health and Local Self-Government).—

(*a*) No amount has been donated to Government for the construction of school buildings in Bellary District.

(*b*) The amounts donated to the local bodies and the dates of deposit are shown in the annexure below.

(*c*) The works have not been taken up promptly as the amounts donated were inadequate for their completion.

All the seven works will be considered for inclusion under the Local Development Works Schemes during 1955-56.

Sl. No.	Purpose for which donation has been given.	Amount of donation deposited.	The Local body to whom donation given.	When amounts were deposited
1.	Construction of a school building in Tekkalakota in Siruguppa Taluk.	4,000 one acre of land	District Board, Bellary.	1947
2.	Construction of a school building in Halavagal in Harpanahalli Taluk.	4,500	Do	1947
3.	Construction of a school building in Hirehadagalli in Hadagalli Taluk.	4,000	Do	1948
4.	Construction of a school building in Desaiur in Siruguppa Taluk.	2,000	Do	1947
5.	Construction of a school building in Kondanayakanahalli in Hospet Taluk.	2,000	Do	1950
6.	Construction of a school building in Duggavatthi in Harapanahalli Taluk.	604 8 0 one acre of land	Do	1949
7.	Construction of a school building in Arsikeri in Harapanahalli Taluk.	600	Do	1949

ಶ್ರೀ ಇಜಾರಿ ಸಿರಸಪ್ಪ.—ಈ ಉತ್ತರದಲ್ಲಿ ಕೊಟ್ಟ ಹಣ ಸಾಲುವುದಿಲ್ಲವೆಂದು ತಿಳಿಸಿದೀರಿ, ಅಂದರೆ buildings estimate ಮಾಡಿಸಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ಇಷ್ಟು ಹಣವೆಂದು donation ಮುಖಾಂತರ ಮತ್ತು local boards ಇಷ್ಟು ಕೊಡ ಬೇಕೆಂಬುದಾಗಿ ಒಂದು ಅಂದಾಜಿನಮೇಲೆ ಮಾಡಿ ದ್ದಾರೆ. ಇಷ್ಟೇ amount ಎಂದು estimate ಮಾಡಿಲ್ಲ.

ಶ್ರೀ ಇಜಾರಿ ಸಿರಸಪ್ಪ.—$\frac{1}{3}$ ಭಾಗ ಡೊನೇಷ್ ಮೂಲಕ, $\frac{1}{3}$ ಭಾಗ ಡಿಸ್ಟ್ರಿಕ್ಟು ಬೋರ್ಡ್ ಮೂಲಕ ಮತ್ತು $\frac{1}{3}$ ಭಾಗ ಸರ್ಕಾರದವರು ಕೊಡಬೇಕೆಂದು ಮದರಾಸ್ ಸರ್ಕಾರದವರು ತೀರ್ಮಾನ ಮಾಡಿ ರುವುದು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದು ನನಗೆ ಗೊತ್ತಿಲ್ಲ.

ಶ್ರೀ ಇಜಾರಿ ಸಿರಸಪ್ಪ.—Estimate ಇಲ್ಲದೆ ಹೋದರೆ inadequate donations ಬಂದಿದೆ ಎಂದು ಹೇಗೆ ಕಂಡುಹಿಡಿಯುವುದು ?

ಶ್ರೀ ಟಿ. ಚನ್ನಯ್ಯ.—ನನಗೆ ಬಂದಿರುವ ವರದಿಯ ಪ್ರಕಾರ ಇಷ್ಟೇ amount ಆಗಬೇಕೆಂದು ಅಂದಾಜಿನ ಮೇಲೆ ಅಷ್ಟು amount ಆದರೆ ಆಗುತ್ತದೆ ಎಂದು ತಿಳಿಸಿದರು. ಆದರೆ ಅವರು ಪುನಃ ಈಗಿನ ಬೆಲೆಗಳು ಜಾಸ್ತಿಯಾಗಿರುವುದರಿಂದ ಕೊಟ್ಟಿರತಕ್ಕಂಥ donation, ಮತ್ತು local boards ಕೊಟ್ಟಿರುವ amount ಸಾಲದು ಎಂದು ತಿಳಿದ್ದಾರೆ.

Sri Ijari SIRASAPPA.—In view of the long delay, at least now, will the Government be pleased to have the estimates prepared and the work taken up early.

Sri T. CHANNIAH.—As I have said in the answer, all the seven works will be taken up under the local development works in the year 1955-56.

Primary School Buildings in Villages of Chamarajanagar Taluk—(Construction).

Q.—447. Sri U. M. MADAPPA (Chamarajanagar).—

Will the Government be pleased to state :—

(*a*) whether the District Board, Mysore, has accepted to construct the buildings for the Primary Schools in the following villages of Chamarajanagar Taluk, namely,—

(1) Kamarvadi
(2) Venkataiahna Chatrada Hosur
(3) Basavapura
(4) Ankanasettypura
(5) Uganeda Hundi
(6) Kilagere
(7) Udigala
(8) Heggothava

(*b*) whether the respective Panchayets of the villages stated above have executed an agreement to pay a small portion of the building expenditure that would be incurred ;

(*c*) whether the estimates of those school buildings of the said villages have been sent to the Government for approval ?

A.—Sri T CHANNIAH (Minister for Public Health and Local Self-Government).—

(*a*) Yes.
(*b*) Yes.
(*c*) No.

ಶ್ರೀ ಯು. ಎಂ. ಮಾದಪ್ಪ.—1953-54ನೇ ಇಸವಿ ಯಲ್ಲಿ ಜಿಲ್ಲಾ ಬೋರ್ಡ್ ಪ್ರೈಮರಿ ಸ್ಕೂಲ್ ಕಟ್ಟಡ ಕಟ್ಟಿಸಬೇಕೆಂದು Director of Public Instructionಗೆ ತಿಳಿಸಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ತಿಳಿಸಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಡೈರೆಕ್ಟರು work orderನ್ನು ಕೊಟ್ಟಿದ್ದಾರೆ ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇನ್ನೂ ಕೊಟ್ಟಿಲ್ಲ.

ಶ್ರೀ ಯು. ಎಂ. ಮಾದಪ್ಪ.—ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. Work order ಕೊಟ್ಟಿದ್ದಾರೆಂಬುದನ್ನು ತಿಳಿಸುತ್ತೇನೆ.

ಶ್ರೀ ಟಿ. ಚನ್ನಯ್ಯ.—ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಇಷ್ಟು ದಿನ ನಿಧಾನ ವಾಗುವುದಕ್ಕೆ ಕಾರಣ ಏನು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ ಇರತಕ್ಕಂಥ donations ಎಷ್ಟು collect ಆಗಿವೆಯೋ ಅಷ್ಟು ಹಣಕ್ಕೆ basement ಕೆಲಸ ನಡೆಯುತಕ್ಕದ್ದು ಎಂದು ಮಾಡಿ ದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ basement ಆದಮೇಲೆ ಮುಂದಕ್ಕೆ ಯಾರು ದುಡ್ಡು ಕೊಡ ಬೇಕು ?

ಶ್ರೀ ಟಿ. ಚನ್ನಯ್ಯ.—ಎಲ್ಲಾ ವಿಲೇಜ್ ಪಂಚಾಯಿತಿ ಗಳೂ ಹಣ ಕೊಟ್ಟ ನಂತರ donations ಮೇಲೆ ಆ ಕೆಲಸಗಳನ್ನು ಪೂರ್ತಿ ಮಾಡಲಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ವಿಲೇಜ್ ಪಂಚಾಯಿತಿ ಯವರು ದುಡ್ಡನ್ನು ಕೊಟ್ಟಿದ್ದಾರೆ ಎಂಬುದು ಸರ್ಕಾರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಮೂರು village panchayats ಕೊಟ್ಟಿದ್ದಾರೆ. ಬಾಕಿ ವಿಲೇಜ್ ಪಂಚಾಯಿತಿಗಳು ಕೊಟ್ಟಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಬಾಕಿ ವಿಲೇಜ್ ಪಂಚಾಯಿತಿಗಳು ಕೆಲಸದ ಮೂಲಕ donations ಕೊಡುತ್ತಾರೆ. ಗ್ರಾಮಸ್ಥರು foundation ತನಕ ಮಾತಬೇಕೆಂದು ಮುಚ್ಚಳಿಕೆ ಬರೆದುಕೊಟ್ಟು ಅವರಿಗೆ contract ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಕೆಲವು ಗ್ರಾಮಗಳಲ್ಲಿ ಅದೇ ರೀತಿ ಕೊಟ್ಟಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಅವರು ತಮ್ಮ ಕೆಲಸ ಮುಗಿಸಿದಮೇಲೆ ಡಿಸ್ಟ್ರಿಕ್ಟು ಬೋರ್ಡ್ ಮತ್ತು ಸರ್ಕಾರದವರು ತಮ್ಮ ಕೆಲಸ ಮಾಡಬೇಕಾದುದು ಕರ್ತವ್ಯವಲ್ಲವೇ ?